## ಕಾಡತೊಡಗಿದ ಬೆದರಿಕೆ ಪತ್ರ

ಬೆದರಿಕೆ ಪತ್ರವೊಂದು ನನ್ನನ್ನು ಸಾಹಿತ್ಯಲೋಕಕ್ಕೆ ಕರೆದೊಯ್ಯುವುದೆಂದು ನಾನು ಊಹಿಸಿರಲಿಲ್ಲ!

1991ರ ಮಾರ್ಚ್ ತಿಂಗಳು. ಮಂಗಳವಾರ.

ಅಂದು ರಾತ್ರಿ ಚೆನ್ನೈನಿಂದ ಲಂಡನ್‌ಗೆ ಏರ್ ಇಂಡಿಯ ವಿಮಾನದಲ್ಲಿ ಹೊರಟಿದ್ದೆ– ಎಡಿನ್‌ಬರೋದಿಂದ ಪತ್ನಿ ವೀಣಾಳನ್ನು ಭಾರತಕ್ಕೆ ವಾಪಸ್ ಕರೆತರುವ ಕಾತುರತೆಯಿಂದ. ಆದರೆ ಆಕೆಯನ್ನು ತಕ್ಷಣ ಹಿಂದಿರುಗಿ ಕರೆತರಲು ಸಾಧ್ಯವೆ ಎಂಬ ಬಗ್ಗೆ ನನ್ನಲ್ಲಿ ಖಚಿತತೆ ಇರಲಿಲ್ಲ. ಕಾರಣ ಎಡಿನ್‌ಬರೋದಿಂದ ವೀಣಾಳ ಪ್ರೊಫೆಸರ್ ಕಳುಹಿಸಿದ್ದ ಫ್ಯಾಕ್ಸ್‌ನಲ್ಲಿ ಆಕೆಯ ಸ್ಥಿತಿಯ ಬಗ್ಗೆ ಯಾವುದೇ ವಿವರ ಕೊಟ್ಟಿರಲಿಲ್ಲ. 'ನಿಮ್ಮ ಪತ್ನಿ ವೀಣಾಳನ್ನು ಅನಾರೋಗ್ಯದ ಕಾರಣ ಆಸ್ಪತ್ರೆಗೆ ಸೇರಿಸಲಾಗಿದೆ. ನೀವು ತಕ್ಷಣ ಹೊರಟು ಬರುವುದು ಅತ್ಯವಶ್ಯಕ' ಎಂದಷ್ಟೆ ಅದರಲ್ಲಿ ತಿಳಿಸಲಾಗಿತ್ತು. ಆ ಕಾಲದಲ್ಲಿ ದೂರವಾಣಿ ಸಂಪರ್ಕಗಳು, ಅದರಲ್ಲೂ ಅಂತರರಾಷ್ಟ್ರೀಯ ಕರೆಗಳು ಈಗಿನಂತೆ ಸರಳಸುಲಭವೂ, ವ್ಯವಸ್ಥಿತವೂ ಆಗಿರದಿದ್ದ ಕಾರಣ ವೀಣಾಳ ಸ್ಥಿತಿಯ ಬಗ್ಗೆ ಸ್ಪಷ್ಟ ಉತ್ತರ ಪಡೆಯಲಾಗಿರಲಿಲ್ಲ. ಹಾಗಾಗಿ ಆಕೆಯ ಬಗ್ಗೆ ದುಗುಡ ಮತ್ತು ಚಿಂತೆಯನ್ನು ಹೊತ್ತೆ ವಿಮಾನ ಹತ್ತಿದ್ದೆ. ಹೊರಡುವ ಮುನ್ನ, ಒಂದೂವರೆ ವರ್ಷದ ಮಗಳು ಪುಣ್ಯಳನ್ನು ನಮ್ಮ ತಂದೆತಾಯಿಯ ಆರೈಕೆಗೆ ಬಿಟ್ಟು ಹೇಳಿದ್ದೆ: 'ವೀಣಾ ಸ್ಥಿತಿ ಹೇಗಿದೆಯೆಂದು ತಿಳಿಯದು, ಆಸ್ಪತ್ರೆಯಿಂದ ಗುಣವಾಗಿ ಯಾವಾಗ ಹೊರಬರುತ್ತಾಳೆ ಎಂದೂ ತಿಳಿಯದು; ಹಾಗಾಗಿ ನಾನು ಯಾವಾಗ ಹಿಂದಿರುಗಿ ಬರುತ್ತೇನೆಂದು ನನಗೇ ಗೊತ್ತಿಲ್ಲ. ನಾನು ಬರುವವರೆಗೆ ಇವಳನ್ನು ನೋಡಿಕೊಳ್ಳಿ' ಎಂದು ಒತ್ತಿ ಬರುತ್ತಿದ್ದ ಕಣ್ಣೀರನ್ನು ಒಳಗೇ ತಳ್ಳಿ, ನನ್ನ ನೋವನ್ನು ಅವರಿಗೆ ತೋರಗೊಡದೆ ಹೊರಟು ಬಂದಿದ್ದೆ.

ಪ್ರಯಾಣದುದ್ದಕ್ಕೂ, ನನ್ನ ತಂದೆತಾಯಿಯಿಂದ ಬಚ್ಚಿಟ್ಟ ಒಂದು ಅಂಶ – 'ವೀಣಾ ಮಾನಸಿಕವಾಗಿ ಕುಗ್ಗಿದ್ದರಿಂದ ಆಸ್ಪತ್ರೆಗೆ ಕರೆದೊಯ್ಯಬೇಕಾಯಿತು' ಎಂದು ಫೋನಿನಲ್ಲಿ ಆಕೆಯ ಪ್ರೊಫೆಸರ್ ಅಸ್ಪಷ್ಟವಾಗಿ ಹೇಳಿದ ಒಂದು ಸೂಕ್ಷ್ಮ ವಿಷಯ ನನ್ನನ್ನು ಆತಂಕಕ್ಕೆ ದೂಡಿತ್ತು. ಕೇರಳದ ಸೈಲೆಂಟ್ ವ್ಯಾಲಿಯ ಉಂಬಳಭರಿತ ದಟ್ಟ ಕಾಡಿನಲ್ಲಿ ಐದು ದಿನಗಳ ಕಾಲ ನಮ್ಮೆಲ್ಲರ ಸರಿಸಾಟಿಯಾಗಿ ನಡೆದು ಆ ಕಣಿವೆಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ದಾಟಿದ ಮೊದಲ ಚಾರಣಿಗಳು ಎನಿಸಿಕೊಂಡಿದ್ದ, ಯಾವುದೇ ಸವಾಲನ್ನು ಧೈರ್ಯದಿಂದ ಎದುರಿಸುತ್ತಿದ್ದ, ವೀಣಾ ಮಾನಸಿಕವಾಗಿ ಕುಗ್ಗುವಂತೆ ಕಾಡಿರಬಹುದಾದ ವಿಷಯವಾದರೂ ಯಾವುದಿರಬಹುದು ಎಂದು ಯೋಚಿಸಿದಂತೆಲ್ಲ ನೆನಪಾಗುತ್ತಿದ್ದದ್ದು ಕೆಲವು ತಿಂಗಳುಗಳ ಹಿಂದೆ ಆಕೆಗೆ ಬಂದಿದ್ದ ಒಂದು ಬೆದರಿಕೆ ಪತ್ರ! ಇದೆಲ್ಲವೂ ಪ್ರಾರಂಭವಾದದ್ದು ಅಮೆರಿಕದ ಒಬ್ಬ ಪ್ರೊಫೆಸರ್ ಅವರಿಂದ!

## ಸೋಮನಾಥಪುರದ ಶಿಲ್ಪ ರಹಸ್ಯ

ಅಮೆರಿಕದ ಒರೆಗಾನ್ ವಿಶ್ವವಿದ್ಯಾಲಯದಿಂದ ಭಾರತಕ್ಕೆ ಬಂದಿದ್ದ ಪ್ರೊಫೆಸರ್ ಜೊಹಾನ್ಸನ್ ಎನ್ನುವವರು 1987–88 ರಲ್ಲಿ ಸೋಮನಾಥಪುರದ ದೇವಾಲಯದಲ್ಲಿನ ಹಲವು ಶಿಲಾಮೂರ್ತಿಗಳ ಕೈಗಳಲ್ಲಿದ್ದ ಕೆತ್ತನೆಗಳನ್ನು ಪರಿಶೀಲಿಸಿ, ಅವು ಮುಸುಕಿನ ಜೋಳದ ತೆನೆಗಳನ್ನು ಹೋಲುತ್ತವೆ ಎಂದು ಮಂಡಿಸಿದ್ದ ವೈಜ್ಞಾನಿಕ ಪ್ರಬಂಧವು, ಮಾನವನ